Order copy of R.R.No 1853240582 Suraj B.Bajaj.doc

# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)


1) ದೂರವಾಣಿ: (08352) 276838 ಅ.ಅ.(ವಿ)
2) ಫ್ಯಾಕ್ಸ್: (08352) 277838
3) ಇ-ಮೇಲ್: seebjp.hescom@gmail.com
4) ಇ-ಮೇಲ್: seehescombjp@yahoo.co.in

ಅಧೀಕ್ಷಕ ಅಭಿಯಂತರರು (ವಿ)
ಕಾರ್ಯ ಮತ್ತು ಪಾಲನೆ ವೃತ್ತ
ಹು.ವಿ.ಸ.ಕಂ.ನಿ. ವಿಜಯಪೂರ
ರವರ ಕಛೇರಿ,


## ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ ಹು.ವಿ.ಸ.ಕಂ.ನಿ. ವಿಜಯಪೂರ.

### ಪ್ರಕರಣ ಸಂಖ್ಯೆ-03 ಮತ್ತು 04/2019-20

ಹಾಜರಿದ್ದವರು:

1) ಶ್ರೀ. ಬಿ.ಬಿ.ಪಾಟೀಲ
ಅಧೀಕ್ಷಕ ಅಭಿಯಂತರರು(ವಿ) ಹಾಗೂ ಅಧ್ಯಕ್ಷರು
2) ಶ್ರೀ. ಎಸ್.ಎ.ಸಿಂಧೂರ
ಉಪಲೆಕ್ಕನಿಯಂತ್ರಣಾಧಿಕಾರಿಗಳು ಹಾಗೂ ಸದಸ್ಯರು
3) ಶ್ರೀ.ಎಸ್.ಎಸ್.ಬಿರಾದಾರ
ಸದಸ್ಯರು.

ಶ್ರೀ.ರಂಗನಾಥ ಮ ಪಾಡಮುಖೆ
(ಶ್ರೀ.ಸೂರಜ ಭಗೀರಥ ಬಜಾಜ್‌ರವರ ಪ್ರತಿನಿಧಿ)
ಸರ್ವೆ ನಂ: 42/1, ಬಂಜಾರ್ ಕ್ರಾಸ್,
ಸೋಲಾಪೂರ ರೋಡ ವಿಜಯಪೂರ .................................................... ದೂರುದಾರರು.

ವಿರುಧ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನೆ ಶಹರ ಉಪವಿಭಾಗ-1
ಹು.ವಿ.ಸ.ಕಂ.ನಿ. ವಿಜಯಪೂರ. .................................................... ಪ್ರತಿವಾದಿ.

**ಪ್ರಕರಣದ ಸಾರಾಂಶ ಕೆಳಗಿನಂತಿರುತ್ತದೆ:**

1) ಶ್ರೀ.ಸೂರಜ ಭಗೀರಥ ಬಜಾಜ್ ಸರ್ವೆ ನಂ: 42/1, ಬಂಜಾರಾ ಕ್ರಾಸ್, ಸೋಲಾಪೂರ ರೋಡ ವಿಜಯಪೂರರವರು ತಮ್ಮ ಸ್ಥಾವರ ಸಂಖ್ಯೆ 1853240582ಕ್ಕೆ ದಿನಾಂಕ 04.11.2019ರಂದು ವಾಣಿಜ್ಯ ಬಳಕೆ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ನೋಂದಣಿ ಮಾಡಿದ್ದು ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು(ವಿ) ಕಾರ್ಯ ಮತ್ತು ಪಾಲನೆ ಶಹರ ಉಪವಿಭಾಗ-1 ಹು.ವಿ.ಸ.ಕಂ.ನಿ. ವಿಜಯಪೂರರವರು ನಿಗದಿತ ಅವಧಿಯಲ್ಲಿ ವಿದ್ಯುತ್ ಸಂಪರ್ಕ ನೀಡಿರುವುದಿಲ್ಲ ಎಂದು ದೂರಿ ದೂರು ಅರ್ಜಿಯನ್ನು ದಿನಾಂಕ:18.11.2019ರಂದು ಅನುಬಂಧ-9 ಫಾರ್ಮ-ಅರಲ್ಲಿ ಶ್ರೀ.ರಂಗನಾಥ ಮ ಪಾಡಮುಖೆ (ಶ್ರೀ.ಸೂರಜ ಭಗೀರಥ ಬಜಾಜ್‌ರವರ ಪ್ರತಿನಿಧಿ)ರವರ ಮುಖಾಂತರ ಗ್ರಾಹಕರ ಕುಂದು ಕೊರತೆ ನಿವಾರಣೆ ವೇದಿಕೆ ವಿಜಯಪೂರ ಜಿಲ್ಲೆ ವಿಜಯಪೂರಕ್ಕೆ ಸಲ್ಲಿಸಿದ್ದಾರೆ.
2) ಪ್ರಸ್ತುತ ಪ್ರಕರಣದ ಕುರಿತು ಸಮಗ್ರ ವರದಿಯನ್ನು ನೀಡುವಂತೆ ಹಾಗೂ ದಿನಾಂಕ: 31.12.2019ರಂದು ವಿಚಾರಣೆಗೆ ಹಾಜರಿರುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು(ವಿ) ಕಾರ್ಯ ಮತ್ತು ಪಾಲನೆ ಶಹರ ಉಪವಿಭಾಗ-1 ಹು.ವಿ.ಸ.ಕಂ.ನಿ. ವಿಜಯಪೂರವರಿಗೆ ಈ ಕಚೇರಿ ಪತ್ರ ಸಂಖ್ಯೆ ಬಿಜೆಪಿ/ಅಅ(ವಿ)/ಉಲೆನಿ/ಹಿಸ(ಕಂ)/19-20/7664-70/ದಿನಾಂಕ:20.12.2019ರಡಿಯಲ್ಲಿ ಪತ್ರ ಬರೆದು ಸೂಚಿಸಲಾಗಿತ್ತು.

Scanned By Camera Scanner

3) ತದ ನಂತರ ಸದರಿ ಸಭೆಯನ್ನು ಆಡಳಿತತಾತ್ಮಕ ದೃಷ್ಟಿಯಿಂದ ಮುಂದೂಡಿ ಪ್ರಕರಣದ ಕುರಿತು ಸಮಗ್ರ ವರದಿಯನ್ನು ನೀಡುವಂತೆ ಹಾಗೂ ದಿನಾಂಕ 03.01.2020ರಂದು ವಿಚಾರಣೆಗೆ ಹಾಜರಿರುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಕಾರ್ಯ ಮತ್ತು ಪಾಲನೆ ಶಹರ ಉಪವಿಭಾಗ-1 ಹು.ವಿ.ಸ.ಕಂ.ನಿ. ವಿಜಯಪೂರವರಿಗೆ ಈ ಕಚೇರಿ ಪತ್ರ ಸಂಖ್ಯೆ ಬಿಜೆಪಿ/ಅಅ(ವಿ)/ಉಲೆನಿ/ಹಿಸ(ಕಂ)/19-20/7742-49/ದಿನಾಂಕ:28.12.2019ರಡಿಯಲ್ಲಿ ಪತ್ರ ಬರೆದು ಸೂಚಿಸಲಾಗಿತ್ತು.

4) ದಿನಾಂಕ: 03.01.2020ರಂದು ಜರುಗಿದ ಗ್ರಾಹಕರ ಕುಂದು ಕೊರತೆ ನಿವಾರಣೆ ವೇದಿಕೆಯ ವಿಚಾರಣೆ ಸಭೆಗೆ ಹಾಜರಾಗಿದ್ದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಕಾರ್ಯ ಮತ್ತು ಪಾಲನೆ ಶಹರ ಉಪವಿಭಾಗ-1 ಹು.ವಿ.ಸ.ಕಂ.ನಿ. ವಿಜಯಪೂರವರು ಪ್ರಕರಣದ ಕುರಿತು ಈ ಕೆಳಗಿನಂತೆ ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ.

ದಿನಾಂಕ: 02.11.2019ರಂದು ಶ್ರೀ.ಸೂರಜ್ ಭಗೀರಥ ಬಜಾಜ ಸರ್ವೆ ನ:42/1, ಬಂಜಾರ್ ಕ್ರಾಸ್, ಸೋಲಾಪೂರ ರೋಡ ವಿಜಯಪೂರವರು ತತ್ಕಾಲ್ ಯೋಜನೆ ಅಡಿ ವಿದ್ಯುತ ಸಂಪರ್ಕಕ್ಕಾಗಿ ಅರ್ಜಿ ನೋಂದಣಿ ಮಾಡಿದ ಪ್ರಯುಕ್ತ ಸದರಿ ಗ್ರಾಹಕರಿಗೆ ಮಂಜೂರಾತಿ ನೀಡಲು ಈ ಕೆಳಕಂಡ ದಾಖಲಾತಿಗಳಾದ

1) Registered Architect Plan
2) Sanctioned Plan of Building from Competent Authority
3) Tatkal urgency document
4) Latest Tax paid receipt ಗಳನ್ನು ಕೊಡಲು ಕಚೇರಿ ಪತ್ರ ಸಂಖ್ಯೆ 3254-55 ದಿನಾಂಕ: 19.11.2019ರಡಿಯಲ್ಲಿ ಸೂಚಿಸಲಾಗಿತ್ತು. ಆದರೆ ಸದರಿ ಗ್ರಾಹಕರು ದಾಖಲಾತಿಗಳನ್ನು ಒದಗಿಸಿರುವುದಿಲ್ಲ ಮತ್ತು ಶ್ರೀ.ಆರ್.ಆರ್.ಬಜಾಜರವರ ಹೆಸರಿನಲ್ಲಿ ಬಾಕಿ ಇರುತ್ತದೆ ಎಂದು ಪತ್ರ ಮುಖೇನ ತಿಳಿಸಲಾಗಿದೆ. ಸದರಿ ಗ್ರಾಹಕರಿಗೆ ಬಾಕಿ ಮೊತ್ತ ರೂ.7,00,504/- ತುಂಬಲು ತಿಳಿಸಿದಾಗ ಗ್ರಾಹಕರು ಒಪ್ಪಿ ಆರ್.ಆರ್.ಸಂಖ್ಯೆ: ಪಿ-59155ಕ್ಕೆ ರೂ.1,00,000/- ರಸೀದಿ ಸಂಖ್ಯೆ 711310477685/07.11.2019ರಂದು ಪಾವತಿಸಿರುತ್ತಾರೆ. ಉಳಿದ ಮೊತ್ತ ರೂ.6,00,504/-ನ್ನು

ಆರ್.ಆರ್.ಸಂಖ್ಯೆ: 56301ಕ್ಕೆ ವರ್ಗಾವಣೆ ಮಾಡಲಾಗಿದೆ ಮತ್ತು ಅದರಲ್ಲಿ ಸದರಿ ಗ್ರಾಹಕರು ರೂ.2,50,000/- ರಸೀದಿ ಸಂಖ್ಯೆ 639620416894/18.12.2019ರಂದು ಪಾವತಿಸಿರುತ್ತಾರೆ. ಉಳಿದ ಮೊತ್ತಕ್ಕೆ ಕರಾರು ಪತ್ರವನ್ನು ಗ್ರಾಹಕರಿಂದ ಬರೆಯಿಸಿಕೊಳ್ಳಲಾಗಿದೆ. ಸದರಿ ಗ್ರಾಹಕರು ಮಾರ್ಚ-2020ರೊಳಗಾಗಿ ಉಳಿದ ಮೊತ್ತವನ್ನು ತುಂಬುತ್ತೇನೆ ಎಂದು ಕಚೇರಿಗೆ ಖುದ್ದಾಗಿ ಬಂದು ಹೇಳಿಕೆ ನೀಡಿರುತ್ತಾರೆ. ತದನಂತರ ಕೆ.ಈ.ಆರ್.ಸಿ. ನಿಯಮಾವಳಿ ಅನುಸಾರ ಗ್ರಾಹಕರಿಗೆ ಸಂಪರ್ಕ ನೀಡಲಾಗುವುದು ಎಂದು ವೇದಿಕೆಯಲ್ಲಿ ತಿಳಿಸಿದರು.

5) ಶ್ರೀ.ರಂಗನಾಥ ಮ ಪಾಡಮುಖೆ (ಶ್ರೀ.ಸೂರಜ ಭಗೀರಥ ಬಜಾಜ್‌ರವರ ಪ್ರತಿನಿಧಿ)ರವರು ವೇದಿಕೆಯಲ್ಲಿ ಈ ಕೆಳಕಂಡಂತೆ ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ.

a) ಈ ಮೊದಲು ಶ್ರೀ.ಆರ್.ಆರ್.ಬಜಾಜ ಇವರ ಹೆಸರಿನಲ್ಲಿ ನಿಯಮಬಾಹಿರವಾಗಿ ವಿದ್ಯುತ್ ಸಂಪರ್ಕ ನೀಡಿರುತ್ತಾರೆ. ಅಂದರೆ ಗ್ರಾಹಕರು ನಿವೇಶನ ಮಾಲೀಕರಾಗದೇ ಇದ್ದ ಪಕ್ಷದಲ್ಲಿ ನಷ್ಟಭರ್ತಿ ಮುಚ್ಚಳಿಕೆ ಪತ್ರ ಪಡೆಯದೇ ನಿಯಮಬಾಹಿರವಾಗಿ ವಿದ್ಯುತ್ ಸಂಪರ್ಕ ಒದಗಿಸಿರುತ್ತಾರೆ.

b) ಗ್ರಾಹಕರಿಗೆ ದಿನಾಂಕ:25.10.2002ರಂದು ವಿದ್ಯುತ ಸಂಪರ್ಕ ಒದಗಿಸಿದ್ದು, ಸದರಿ ಗ್ರಾಹಕರಿಗೆ ಅಗಷ್ಟ-2010ರಂದು ಹೆಚ್ಚುವರಿ ಹಣದ ಬಿಲ್ ನೀಡಿರುತ್ತಾರೆ.ಸದರಿ ವಿಷಯಕ್ಕೆ ನಿಯಮಾನುಸಾರವಾಗಿ ಗ್ರಾಹಕರಿಗೆ ನೋಟಿಸ್ ನೀಡಿರುವುದಿಲ್ಲ.

c) ಗ್ರಾಹಕರ ಮಾಪಕವನ್ನು ಕಳಚಿದ್ದು, ಸದರಿ ವಿಷಯವಾಗಿ ಗ್ರಾಹಕರಿಗೆ ತಿಳಿಸಿರುವುದಿಲ್ಲ.

d) ಗ್ರಾಹಕರ ಬಾಕಿಯನ್ನು ಅವರ ಬೇರೆ ವಿದ್ಯುತ್ ಸಂಪರ್ಕ ಸಂಖ್ಯೆಗೆ ವರ್ಗಯಿಸಿರುತ್ತಾರೆ. ಆದರೆ ಗ್ರಾಹಕರಿಗೆ ನಿಯಮಾನುಸಾರವಾಗಿ ಸೂಚನೆ ನೀಡಿರುವುದಿಲ್ಲ.

6) ದಿನಾಂಕ: 03.01.2020ರಂದು ಶ್ರೀ.ಸೂರಜ್ ಭಗೀರಥ ಬಜಾಜ ಸರ್ವೆ ನ:42/1, ಬಂಜಾರ್ ಕ್ರಾಸ್, ಸೋಲಾಪೂರ ರೋಡ ವಿಜಯಪೂರವರು ತಮ್ಮ ಪ್ರತಿನಿಧಿಯಾದ ಶ್ರೀ.ರಂಗನಾಥ ಮ ಪಾಡಮುಖೆರವರು ಇಬ್ಬರೂ ವೇದಿಕೆಯಲ್ಲಿ ವೇದಿಕೆಯಲ್ಲಿ ಸಲ್ಲಿಸಿರುವ ಪ್ರಕರಣವನ್ನು ಹಿಂಪಡೆಯುತ್ತೇವೆ ಎಂದು ಲಿಖಿತವಾಗಿ ಒಪ್ಪಿಗೆ ಪತ್ರ ನೀಡಿರುತ್ತಾರೆ.

Scanned By Camera Scanner

Order copy of R.R.No 1853240582 Suraj B.Bajaj.doc

ಪ್ರಕರಣವನ್ನು ಮತ್ತು ಹೇಳಿಕೆ ಮತ್ತು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಆದೇಶ ಸಂಖ್ಯೆ ವಿಜೆಪಿ/ಅ.ಅ(ವಿ)/ಉಲೆನಿ/ಹಿಸ(ಕಂ)/ಗ್ರಾವೇ/19-20/ 645-318 ದಿನಾಂಕ: 6 FEB 2020

**-:ಆದೇಶ:-**

ದಿನಾಂಕ: 03.01.2020ರಂದು ಶ್ರೀ.ರಂಗನಾಥ ಮ ಪಾಡಮುಖೆ ಮತ್ತು ಶ್ರೀ.ಸೂರಜ ಭಗೀರಥ ಬಜಾಜ್ ಇಬ್ಬರೂ ಗ್ರಾಹಕರ ಕುಂದು ಕೊರತೆ ನಿವಾರಣೆ ವೇದಿಕೆಯಲ್ಲಿ ದಾಖಲಿಸಿದ ದೂರನ್ನು ಹಿಂಪಡೆಯುದಾಗಿ ಲಿಖಿತ ಹೇಳಿಕೆ ನೀಡಿದ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಕರಣ ಇತ್ಯರ್ಥಗೊಂಡಿದ್ದು ಎಂದು ನಿರ್ಧರಿಸಿ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶ ಹೊರಡಿಸಲಾಗಿದೆ.

| | | |
|---|---|---|
| 6/2/2020 | ಅನುಪಸ್ಥಿತಿ | |
| ಸದಸ್ಯರು | ಸದಸ್ಯರು | ಅಧ್ಯಕ್ಷರು |
| ಶ್ರೀ ಎಸ್.ಎ.ಸಿಂಧೂರ | ಶ್ರೀ ಎಸ್.ಎಸ್.ಬಿರಾದಾರ | ಶ್ರೀ.ಬಿ.ಬಿ.ಪಾಟೀಲ |
| ಉಪಲೆಕ್ಕನಿಯಂತ್ರಣಾಧಿಕಾರಿ | ಬಿರಾದಾರ ಕೆಮಿಕಲ್ಸ್ | ಅಧೀಕ್ಷಕ ಅಭಿಯಂತರರು (ವಿ) |
| ಗ್ರಾ.ಕುಂ.ಕೊ.ನಿ.ವೇದಿಕೆ | ಗ್ರಾ.ಕುಂ.ಕೊ.ನಿ.ವೇದಿಕೆ | ಗ್ರಾ.ಕುಂ.ಕೊ.ನಿ.ವೇದಿಕೆ |
| ವಿಜಯಪೂರ ವೃತ್ತ | ವಿಜಯಪೂರ ವೃತ್ತ | ವಿಜಯಪೂರ ವೃತ್ತ |

04 6/2/20

**ಪ್ರತಿಯನ್ನು ಗೌರವಪೂರ್ವಕ ಮಾಹಿತಿಗೆ ಸಲ್ಲಿಸಿದೆ.**

1) ಮಾನ್ಯ ಮುಖ್ಯ ಇಂಜನೀಯರರು(ವಿ) ಕಾರ್ಯ ಮತ್ತು ಪಾಲನೆ ವಲಯ ಹು.ವಿ.ಸ.ಕಂ.ನಿ. ಬೆಳಗಾಂವ.

**ಪ್ರತಿ ಅಭಿವಂದನೆಗಳೊಂದಿಗೆ**

2) ನಿಯಂತ್ರಣಾಧಿಕಾರಿಗಳು (ಕಂ&ಲೆ) ನಿಗಮ ಕಚೇರಿ ಪಿ.ಬಿ.ರೋಡ ನವನಗರ ಹು.ವಿ.ಸ.ಕಂ.ನಿ. ಹುಬ್ಬಳ್ಳಿ
3) ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾಸಂಅ) ನಿಗಮ ಕಚೇರಿ ಪಿ.ಬಿ.ರೋಡ ನವನಗರ ಹೆಸ್ಕಾಂ ಹುಬ್ಬಳ್ಳಿ.
4) ಪ್ರತಿ ಆಪ್ತ ಕಾರ್ಯದರ್ಶಿಗಳು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂತ್ರಿಕ)/ಮಾನ್ಯ ಆರ್ಥಿಕ ಸಲಹೆಗಾರರು ನಿಗಮ ಕಚೇರಿ ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಇದನ್ನು ಮಾನ್ಯರ ಗಮನಕ್ಕೆ ತರಲು.

**ಪ್ರತಿ ಮಾಹಿತಿಗಾಗಿ**

5) ಶ್ರೀ ಸಿದ್ದನಗೌಡ .ಶಿವನಗೌಡ. ಬಿರಾದಾರ ಪ್ರೊ//ಬಿರಾದಾರ ಕೆಮಿಕಲ್ಸ್ ಪ್ಲಾಟ ನಂ.1 ಪೋಸ್ಟ ಬಾಕ್ಸ ಸಂಖ್ಯೆ: 2 ಇಂಡಸ್ಟ್ರೀಯಲ್ ಎಸ್ಟೇಟ್ ಸ್ಟೇಷನ ಬ್ಯಾಕ ರೋಡ ವಿಜಯಪೂರ-586 104. ರವರ ಮಾಹಿತಿಗಾಗಿ.
6) ಕಾರ್ಯನಿರ್ವಾಹಕ ಅಭಿಯಂತರರು(ವಿ) (Regulatory Affairs) ನಿಗಮ ಕಚೇರಿ ಪಿ.ಬಿ.ರೋಡ ನವನಗರ ಹು.ವಿ.ಸ.ಕಂ.ನಿ. ಹುಬ್ಬಳ್ಳಿ.
7) ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಕಾರ್ಯ ಮತ್ತು ಪಾಲನೆ ಉಪವಿಭಾಗ ಹು.ವಿ.ಸ.ಕಂ.ನಿ. ಚಡಚಣ.
8) ಶ್ರೀ.ಸೂರಜ ಭಗೀರಥ ಬಜಾಜ್ ಸರ್ವೆ ನ:42/1, ಬಂಜಾರ್ ಕ್ರಾಸ್, ಸೋಲಾಪೂರ ರೋಡ ವಿಜಯಪೂರರವರ ಮಾಹಿತಿಗಾಗಿ.
9) ಶ್ರೀ.ರಂಗನಾಥ ಮ ಪಾಡಮುಖೆ (ಶ್ರೀ.ಸೂರಜ ಭಗೀರಥ ಬಜಾಜ್‌ರವರ ಪ್ರತಿನಿಧಿ) ನಿವೇಶನ ಸಂಖ್ಯೆ-6 ಮಾದರಿ-ಸಿ ಸೆಕ್ಟರ ನಂ.10, ನವನಗರ ಬಾಗಲಕೋಟರವರ ಮಾಹಿತಿಗಾಗಿ.
10) ಪ್ರತಿ ಪ್ರಧಾನ ಕಡತಕ್ಕೆ.

Scanned By Camera Scanner